

2018ರಲ್ಲಿ ತೆರೆಕಂಡ ಶಾರುಖ್ ಖಾನ್ ನಟನೆಯ ‘ಝೀರೊ’ ಸಿನಿಮಾ ಕನ್ನಡದ ‘ಕೆ.ಜಿ.ಎಫ್.’ ಎದುರಿಗೆ ಕುಬ್ಜವಾಗಿಬಿಟ್ಟಿದ್ದು ಬಾಲಿವುಡ್ ಮಂದಿಗೆ ಈಗಲೂ ಅರಗಿಸಿಕೊಳ್ಳಲಾಗುತ್ತಿಲ್ಲ.

### ಗಳಿಕೆಯ ವರದಿಗಳು

ಮೊದಲು ಸಿನಿಮಾಗಳು ಎಷ್ಟು ಆದಾಯ ಗಳಿಸಿದವು ಎನ್ನುವುದು ಭಾರಿ ಗುಟ್ಟಾಗಿತ್ತು. ‘ಮುಂಗಾರು ಮಳೆ’ ಒಟ್ಟು 30 ಕೋಟಿ ರೂಪಾಯಿ ತಂದುಕೊಟ್ಟಿತೆಂದು ನಿರ್ಮಾಪಕರು ಹೇಳುವಷ್ಟರಲ್ಲಿ ವರ್ಷವೇ ಆಗಿತ್ತು. ಆದರೀಗ ಹಾಗಲ್ಲ. ಚಿತ್ರದ ಯಾವ್ಯಾವ ನಟ–ನಟಿಗೆ ಎಷ್ಟು ಸಂಭಾವನೆ ನಿಗದಿಯಾಗಿದೆ ಎನ್ನುವುದರಿಂದ ಹಿಡಿದು, ಬಿಡುಗಡೆಯಾದ ಮೇಲೆ ಪ್ರತಿ ದಿನದ ಗಳಿಕೆ ಎಷ್ಟಿದೆ ಎಂಬ ವರದಿಯನ್ನು ಅನೇಕ ಮಾಧ್ಯಮಗಳು, ವೆಬ್‌ಸೈಟ್‌ಗಳು ಪ್ರಕಟಿಸತೊಡಗಿವೆ. ಅವುಗಳ ಮೂಲ ಮಾತ್ರ ನಿಗೂಢ. ಚಿತ್ರತಂಡದವರೇ ಅಧಿಕೃತವಾಗಿ ಘೋಷಿಸಿದರಷ್ಟೆ ಅದಕ್ಕೆ ಅರ್ಥ. ಹೀಗಿದ್ದೂ ಸಿನಿಮಾ ಪ್ರಚಾರದ ಭಾಗವಾಗಿಯೇ ಇವನ್ನೆಲ್ಲ ಸ್ವೀಕರಿಸುವ ಮನೋಭಾವ ಈಗ ಚಿತ್ರ ಕರ್ಮಿಗಳಲ್ಲೂ ಮೂಡಿದೆ. 100 ಕೋಟಿ ರೂಪಾಯಿ ಬಜೆಟ್ಟಿನ ‘ಕೆಜಿಎಫ್2’ ಮೊದಲ ದಿನವೇ ಹಿಂದಿಯಲ್ಲೇ 50 ಕೋಟಿ ರೂಪಾಯಿಗಿಂತ ಹೆಚ್ಚು ಗಳಿಸಿತು ಎನ್ನುವ ವರದಿಯ ಮೂಲಕ್ಕಿಂತ ಅದು ಹುಟ್ಟಿಸುವ ಕುತೂಹಲವನ್ನೇ ಎಲ್ಲರೂ ಬಂಡವಾಳ ಮಾಡಿಕೊಳ್ಳುತ್ತಿದ್ದಾರೆ. ‘ಇಂಡಸ್ಟ್ರಿ ರಿಸೋರ್ಸಸ್’ ಎಂಬ ಜಾಣತನದ ಒಕ್ಕಣೆ ಇಂತಹ ಪ್ರಚಾರದಲ್ಲಿ ಬಳಕೆಯಾಗುತ್ತಿದೆ.

ಕನ್ನಡ ಹೆಚ್ಚು ಪ್ರಭಾವಿ. ಮಲಯಾಳಂ ಕೂಡ ಆಮೇಲೆ ಪ್ರವರ್ಧಮಾನಕ್ಕೆ ಬಂದದ್ದು. ಮದ್ರಾಸ್‌ನಲ್ಲಿ ಸ್ಟುಡಿಯೊಗಳು ಹೆಚ್ಚಾಗಿ ಇದ್ದಿದ್ದರಿಂದ ಸಿನಿಮಾ ಸಂಸ್ಕೃತಿಯ ಜೀವಕೇಂದ್ರ ಅದಾಗಿತ್ತು. ಶಿಫ್ಟುಗಳಲ್ಲಿ ಅಲ್ಲಿ ಸೆಟ್ ಹಾಕಿ ಚಿತ್ರೀಕರಣ ನಡೆಸುತ್ತಿದ್ದ ತಂಡಗಳಿದ್ದವು. ಕನ್ನಡದ ಚಿತ್ರ ನಿರ್ಮಾಣ ಸಂಸ್ಥೆಗಳೂ ಸಂಬಳ ಕೊಟ್ಟು ಕೆಲಸಕ್ಕೆ ಇಟ್ಟಂಥ ಚಿತ್ರಕರ್ಮಿಗಳು ಇದ್ದರು. ತಮಿಳಿನಲ್ಲಿ ಯಾವುದಾದರೂ ಸಿನಿಮಾ ಹಿಟ್ ಆದರೆ ಚಕ್ಕನೆ ಅದರ ಹಕ್ಕನ್ನು ಪಡೆದು ದ್ವಾರಕೀಶ್ ತರಹದವರು ಕನ್ನಡಕ್ಕೆ ರೀಮೇಕ್ ಮಾಡುತ್ತಿದ್ದರು. ಕೆಲವು ಚಿತ್ರಗಳು ಬರೀ ಎರಡು ವಾರದಲ್ಲಿ ತಯಾರಾದ ಉದಾಹರಣೆಗಳೂ ಇವೆ. ‘ಪ್ಯಾರ್ ಝುಕ್ತಾ ನಹೀ’ ಹಿಂದಿ ಸಿನಿಮಾ ‘ನೀ ಬರೆದ ಕಾದಂಬರಿ’ ಆಗಿ ಗೆದ್ದಿತು. ಪ್ರಕಾಶ್ ಮೆಹ್ರಾ ಚಿತ್ರಕೃತಿ ‘ಶರಾಬಿ’ಯು ‘ನೀ ತಂದ ಕಾಣಿಕೆ’ ಆಗಿ ಮೂಡಿಬಂತು. ಗಿರೀಶ್ ಕಾರ್ನಾಡರೂ ಈ ಚಿತ್ರದಲ್ಲಿ ಅಭಿನಯಿಸಿದ್ದು, ಚಿ. ಉದಯ್‌ಶಂಕರ್ ಕನ್ನಡತನದ ಬರವಣಿಗೆಯ ಅಲಂಕಾರ ತೊಡಿಸಿದ್ದು ಸ್ಮರಣೀಯ. ನಟ ವಿಷ್ಣುವರ್ಧನ್ ಅವರ ಮೇಲೆ ಅಮಿತಾಭ್ ಬಚ್ಚನ್ ಪ್ರಭಾವ ಇತ್ತೆನ್ನುವುದಕ್ಕೆ ಇಂತಹ ಕೆಲವು ಉದಾಹರಣೆಗಳು ಸಿಗುತ್ತವೆ. ‘ಶೆಹನ್‌ಶಾ’ ಆತ್ಮವನ್ನು ಎತ್ತಿಕೊಂಡು ಬಂದು 1988ರಲ್ಲೇ ‘ದಾದಾ’ ಎಂಬ ಚಿತ್ರವನ್ನು ಪಿ. ವಾಸು ನಿರ್ದೇಶಿಸಿದರು. ಕನ್ನಡದಲ್ಲಿ ಹಲವಾರು ಚಿತ್ರಗಳಿಗೆ ಬಂಡವಾಳ ಹೂಡಿದ್ದ ಆರ್. ಕೆ. ಮಾಣಿಕ್ ಚಂದ್ ಅದನ್ನು ನಿರ್ಮಿಸಿದ್ದರು. ಇದೇ ವಾಸು ಜಾಣತನವನ್ನು ಕಂಡು ದ್ವಾರಕೀಶ್ 1993ರಲ್ಲಿ ತೆರೆಕಂಡಿದ್ದ ಮಲಯಾಳಂನ ‘ಮಣಿಚಿತ್ರತಾಳು’ವನ್ನು ಕನ್ನಡಕ್ಕೆ ತಂದದ್ದು. ‘ಆಪ್ತಮಿತ್ರ’ ಸಿನಿಮಾದ ಬರವಣಿಗೆಯ ಕ್ರೆಡಿಟ್ಟನ್ನೂ ವಾಸು ತಮ್ಮ ಹೆಸರಿಗೇ ಬರೆದುಕೊಂಡರು. ಅದೇ ಆಮೇಲೆ ರಜನೀಕಾಂತ್ ಅವರಿಗೂ ಇಷ್ಟವಾಗಿ, ತಮಿಳಿಗೂ ರೀಮೇಕ್ ಆಗಿಬಿಟ್ಟಿತು. ದ್ವಾರಕೀಶ್ ಅವರಿಗೆ ತಮಿಳು ಸಿನಿಮಾ ನಿರ್ಮಾಣದ ಹಕ್ಕುದಾರ ತಾವಾಗಲಿಲ್ಲ ಎನ್ನುವುದಕ್ಕೆ ಈಗಲೂ ಬೇಸರವೂ, ವಾಸು ಬಗೆಗೆ ಆ ವಿಷಯದಲ್ಲಿ ಕೋಪವೂ ಇದೆ. ಇದೇ ಚಿತ್ರ ಹಿಂದಿಯಲ್ಲಿ ‘ಭೂಲ್ ಭುಲಯ್ಯ’ ಎಂದು ರೀಮೇಕ್ ಆಯಿತು. ಅದನ್ನು ನಿರ್ದೇಶಿಸಿದ್ದು ಮತ್ತೊಬ್ಬ ಮಲಯಾಳಿ ಪ್ರಿಯದರ್ಶನ್. 1993ರ ಸಿನಿಮಾವೊಂದು ಕನ್ನಡಕ್ಕೆ ರೀಮೇಕ್ ಆದಮೇಲೆ ಭಾರತದ ಹಲವು ಭಾಷೆಗಳಿಗೆ ರೂಪಾಂತರಗೊಂಡು ಚೆನ್ನಾಗಿಯೇ ವಹಿವಾಟು ನಡೆಸಿದ ಈ ಉದಾಹರಣೆಯನ್ನು ಈಗಿನ ಪಲ್ಲಟವಾಗಿರುವ ಸಿನಿಮಾ ಮಾರುಕಟ್ಟೆಯ ಪಕ್ಕ ಇಟ್ಟು ನೋಡಬೇಕು.

‘ಕಸ್ತೂರಿ ನಿವಾಸ’ ಕನ್ನಡ ಸಿನಿಮಾದ ನಾಯಕನ ಪಾತ್ರದ ತೂಕವನ್ನು ಸಾಂಸ್ಕೃತಿಕ ಚರ್ಚೆಯಲ್ಲಿ ಈಗಲೂ ಪ್ರಸ್ತಾಪ ಮಾಡುತ್ತಿರುತ್ತೇವೆ. ಆ ಸಿನಿಮಾ ಆದ ಬಗೆ ಕುತೂಹಲಕಾರಿ. ಜಿ. ಬಾಲಸುಬ್ರಹ್ಮಣ್ಯಂ ಎಂಬ ತಮಿಳಿನ ಕಥೆಗಾರರು ಬರೆದಿದ್ದ ವಸ್ತು ಅದು. ಅದಕ್ಕೆ 25 ಸಾವಿರ ರೂಪಾಯಿ ಸಂಭಾವನೆ ನೀಡಿ, ನೂರ್ ಎಂಬ ಒಬ್ಬ ನಿರ್ಮಾಪಕರು ಹಕ್ಕು ಪಡೆದಿದ್ದರು. ಶಿವಾಜಿ ಗಣೇಶನ್ ಅವರಿಂದ ನಾಯಕನ ಪಾತ್ರ ಮಾಡಿಸಬೇಕೆನ್ನುವುದು ಆ ನಿರ್ಮಾಪಕರ ಬಯಕೆ. ಕಥೆಯ ಎಳೆ ಕೇಳಿದ ಶಿವಾಜಿ ಗಣೇಶನ್, ‘ಅರೆ... ವಿಪರೀತ ಮೆಲೋಡ್ರಾಮಾ ಇದೆ. ನಾಯಕನ ಪಾತ್ರ ಸಾಯುತ್ತದೆ. ನಾನೇ ಸತ್ತರೆ